ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,

ಮಹದೇವಪುರ ವಲಯ, ಬೆಂಗಳೂರು – 560 113.

/ವಾರ್ಡ್–25/ಪಿ.ಆರ್/ /2022–23 ದಿನಾಂಕ:–08.04.2022

## "ಸಭಾ ಸೂಚನಾ ಪತ್ರ"

ವಿಷಯ:– ದಿನಾಂಕ:–08.04.2022 ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ ಹೊರಮಾವು ಉಪವಿಭಾಗ ವಾರ್ಡ್ ನಂ.25 ರ ಕಛೇರಿಯಲ್ಲಿ ನಡೆಯುವ ಸಭೆಗೆ ಹಾಜರಾಗುವ ಬಗ್ಗೆ.

ಉಲ್ಲೇಖ:–ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/2020–21, ದಿನಾಂಕ:21/09/2020.

***********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ...ಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ...ಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕೊಳವೆ ಸಾಲುಗಳ ...ುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ...ಾಗೂ ಎಲ್ಲಾ ಇಲಾಖೆಯ ಅಧಿಕಾರಿಗಳು ವಾರ್ಡ್ ನಂ.25 ರ ಹೊರಮಾವು ಉಪವಿಭಾಗಕ್ಕೆ ಸಂಬಂಧಿಸಿದ ...ದಿಗೆ ದಿನಾಂಕ:–08.04.2022 ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ ವಾರ್ಡ್ ನಂ.25 ರ ಸ.ಕಾ.ಅ ಕಛೇರಿಗೆ ಹಾಜರಾಗಲು ಕೋರಲಾಗಿದೆ.

...ನೆ:– Covid–19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ್ ಧರಿಸಬೇಕು ...ಜಿಕ ಅಂತರವನ್ನು ಕಾಯ್ದುಕೊಳ್ಳುವುದು.

ಸಂಚಾಲಕರು
ಮತ್ತು ಸಹಾಯಕ ಅಭಿಯಂತರರು
ಹೊರಮಾವು ವಾರ್ಡ್ ಸಂಖ್ಯೆ–25.

...ಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ, ಬಿಬಿಎಂಪಿ.
...ಪಾಲಕ ಅಭಿಯಂತರರು, ವಿದ್ಯುತ್ (ಮಹದೇವಪುರ ವಲಯ) ಬಿಬಿಎಂಪಿ.
...ಪಾಲಕ ಅಭಿಯಂತರರು, ಬಿಡಬ್ಲೂಎಸ್ಎಸ್ಬಿ. ಸಿಎಂಸಿ
...ಪಾಲಕ ಅಭಿಯಂತರರು, ಬಿಡಬ್ಲೂಎಸ್ಎಸ್ಬಿ. 110 ಹಳ್ಳಿಗಳ ವ್ಯಾಪ್ತಿ.
...ಪಾಲಕ ಅಭಿಯಂತರರು, ಬೆಸ್ಕಾಂ.
...ಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು ಬಿಬಿಎಂಪಿ.
...ಪಾಲಯ ಅಭಿಯಂತರರು, ಕೆರೆಗಳ ವಿಭಾಗ, ಬಿಬಿಎಂಪಿ.
...ಪಾಲಯ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ, ಬಿಬಿಎಂಪಿ.
... ವೈದ್ಯಾಧಿಕಾರಿಗಳು, ಕೆ.ಆರ್.ಪುರ.
...ಕ ನಿರ್ದೇಶಕರು, ನಗರ ಯೋಜನೆ, ಮಹದೇವಪುರ ವಲಯ. ಬಿಬಿಎಂಪಿ.
...ಕುಮಾರ್, ಆರೋಗ್ಯಾಧಿಕಾರಿಗಳು, ಕೆ.ನಾರಾಯಣಪುರ ಪ್ರಾಥಮಿಕ ಆರೋಗ್ಯ ಕೇಂದ್ರ.
...ಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಕೆ.ಆರ್.ಪುರ.
...ಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪವಿಭಾಗ, ಬಿಬಿಎಂಪಿ.
...ಾಲಕ ಅಭಿಯಂತರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. ಆರ್.ಟಿ.ನಗರ.
...ಕಾರಿಗಳು, ಮಹದೇವಪುರ ವಲಯ, ಬಿಬಿಎಂಪಿ.
...ಠಾಣೆ ಅಧಿಕಾರಿ ಹೆಣ್ಣೂರು/ಕೊತ್ತನೂರು/ರಾಮಮೂರ್ತಿನಗರ.
... ಇನ್ಸ್‌ಪೆಕ್ಟರ್, ಲಾ ಅಂಡ್ ಆರ್ಡರ್ ರಾಮಮೂರ್ತಿನಗರ/ಕೊತ್ತನೂರು/ಹೆಣ್ಣೂರು ಪೊಲೀಸ್ ಠಾಣೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021-22 ದಿನಾಂಕ: 08.04.2022

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ರ ಆದೇಶದಂತೆ ಹೊರಮಾವು ವಾರ್ಡ್ ಸಂಖ್ಯೆ-25 ರ ನೋಡಲ್ ಅಧಿಕಾರಿಯಾದ ಶ್ರೀಮತಿ.ಸರೋಜದೇವಿ ಉಪ ಆಯುಕ್ತರು (ಮಹದೇವಪುರ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:-08.04.2022 ರಂದು ಪೂರ್ವಾಹ್ನ 11.30 ಗಂಟೆಗೆ ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ-ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀ.ರಮೇಶ್ | ಕಿರಿಯ ಅಭಿಯಂತರರು | |
| 3 | ಶ್ರೀಮತಿ.ಚೈತ್ರಾ ವೆಂಕಟೇಶ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು. | |
| 4 | ಶ್ರೀ.ಸಂಜಯ್ ಕುಮಾರ್ | ಹಿರಿಯ ಆರೋಗ್ಯ ನಿರೀಕ್ಷಕರು | |
| 5 | ಶ್ರೀ.ಹರೀಶ್ | ಕಿರಿಯ ಆರೋಗ್ಯ ನಿರೀಕ್ಷಕರು | |
| 6 | ಶ್ರೀಮತಿ.ಶ್ರೀದೇವಿ | ವ್ಯವಸ್ಥಾಪಕರು | |
| 7 | ಶ್ರೀ.ಮೋಹನ್ | ಬೀದಿ ದೀಪಗಳ ನಿರ್ವಹಣೆ | |
| 8 | ಶ್ರೀ.ಭಾಸ್ಕರ್ ನಾಯ್ಡು | ಹೊಯ್ಸಳನಗರ | |
| 9 | ಶ್ರೀ.ಭೂಷಣ್.ಬಿ | | |
| 10 | ಶ್ರೀ.ತಿರುನಾವ್‌ಕರಸು | | |
| 11 | ಶ್ರೀ.ಭಾಸ್ಕರ್ ರೆಡ್ಡಿ | | |
| 12 | ಶ್ರೀ.ಜಯ ಮಗೇಶ್ | | |
| 13 | ಶ್ರೀ.ಜೆ.ಪಿ.ನಂದನ | | |
| 14 | ಶ್ರೀ.ಡಿ.ಕೆ.ಪ್ರಸಾದ್ | | |
| 15 | ಶ್ರೀ.ಸುಂದರ ಮೂರ್ತಿ | | |
| 16 | ಶ್ರೀ.ರಮೇಶ್ | | |
| 17 | ಶ್ರೀ.ಶಿವದಾಸನ್ | | |
| 18 | ಶ್ರೀ.ಜೋಸೆಫ್ ಹೆನ್ರಿ | | |
| 19 | ಶ್ರೀ.ರಾಜು, | ಹೊರಮಾವು ಅಗರ ರಾಜಣ್ಣ ಬಡಾವಣೆ | |
| 20 | ಶ್ರೀ.ನಂಜಪ್ಪ, | ಸರ್.ಎಂ.ವಿ ನಗರ ಬಡಾವಣೆ | |
| 21 | ಶ್ರೀ.ದಯಾನಂದ್, | ದಾಸಪ್ಪ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್ | |
| 22 | ಶ್ರೀಮತಿ ರಾಜೇಶ್ವರಿ | | |
| 23 | ಶ್ರೀ.ಜಿ.ಆರ್.ಮೂರ್ತಿ | | |
| 24 | ಆರ್.ವಿಜಯ ಕುಮಾರ | | |
| 25 | ಶ್ರೀ.ಪ್ರವೀಣ್ ಕುಮಾರ್ | | |

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲೂಎಸ್‌ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ಮು.ಕಿ.ನೋ

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

ಶ್ರೀ.ಉಲ್ಲಾಸ್ ಮತ್ತು ಸೋಗಿ ಹೆಚ್.ಆರ್.ಬಿ.ಆರ್ ಬಡಾವಣೆ, 1ನೇ ಬ್ಲಾಕ್ :- ರವರು ಮಾತನಾಡಿ ರಾಜಕಾಲುವೆ ನೀರು ರಸ್ತೆಯಲ್ಲಿ ಹರಿಯುತ್ತಿದ್ದು, ಈಗ ಕಾಲುವೆಯನ್ನು ಹೊಸದಾಗಿ ನಿರ್ಮಿಸಿ ಮಾಡ್ಯುಲ್ ನೀರು ರಸ್ತೆಗೆ ಹರಿಯುತ್ತಿರುವ ಬಗ್ಗೆ ಕ್ರಮವಹಿಸಿದ್ದು, ಪಾಲಿಕೆ ಸಿಬ್ಬಂದಿಗೆ ಅಭಿನಂದನೆಯನ್ನು ಸಲ್ಲಿಸಿರುತ್ತಾರೆ. ಮತ್ತು ಹೆಚ್.ಆರ್.ಬಿ.ಆರ್ ಬಡಾವಣೆಯ ರಸ್ತೆಗಳನ್ನು ಅಭಿವೃದ್ಧಿ ಮಾಡಿಕೊಡಲು ಕೋರಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ಬಾಸ್ಕರ್ ನಾಯ್ಡು ಹಾಗೂ ಶ್ರೀ.ತಿರುನಾವ್‌ಕರಸು, ಶ್ರೀ ವಿಮಲ್, ಶ್ರೀ ಶ್ರೀನಿವಾಸ್, ಶ್ರೀ ಲಕ್ಷ್ಮಿ ನಾರಾಯಣ, ಶ್ರೀ ಶಿವದಾಸನ್, ಶ್ರೀ.ರಾಜು ಹೊಯ್ಸಳ ನಗರ ಎನ್‌ಕ್ಲೇವ್ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ 4ನೇ, 6 ನೇ ಅಡ್ಡರಸ್ತೆಯಲ್ಲಿ ಆರ್.ಸಿ.ಸಿ ಚರಂಡಿ ನಿರ್ಮಿಸಲು ಮತ್ತು 6ನೇ ಮುಖ್ಯರಸ್ತೆಯಲ್ಲಿ ಹಾಲಿ ಚರಂಡಿಯಲ್ಲಿ ನೀರು ಹರಿಯದಿರುವ ಬಗ್ಗೆ ಇದನ್ನು ಸರಿಪಡಿಸಲು ಕೋರಿಕೊಂಡಿರುತ್ತಾರೆ. 8ನೇ ಅಡ್ಡರಸ್ತೆಯಲ್ಲಿ ಮತ್ತು 2ನೇ ಅಡ್ಡರಸ್ತೆಯಲ್ಲಿ ಚರಂಡಿ ನಿರ್ಮಿಸಲು ಕೋರಿದ್ದು, ಹಾಗೂ 3ನೇ ಮುಖ್ಯರಸ್ತೆ 5ನೇ ಅಡ್ಡರಸ್ತೆಯಲ್ಲಿ ಮತ್ತು 12ನೇ ಅಡ್ಡರಸ್ತೆಯಲ್ಲಿ 3 ಒಳಚರಂಡಿ ಛೇಂಬರ್‌ಗಳು ಸ್ಥಳಾಂತರಗೊಂಡಿದ್ದು, ಇವುಗಳನ್ನು ಬದಲಾಯಿಸಿ ಸರಿಪಡಿಸಲು ಮತ್ತು 7ನೇ ಅಡ್ಡರಸ್ತೆಯಲ್ಲಿ ಬಿಬಿಎಂಪಿ ನೀರು ಸರಬರಾಜು ಕೊಳವೆಯನ್ನು ಲಿಂಕ್ ಮಾಡಲು ಕೋರಿಕೊಂಡಿರುತ್ತಾರೆ ಮತ್ತು 14ನೇ ಬಿ ಅಡ್ಡರಸ್ತೆಯಲ್ಲಿ ಮತ್ತು 20ನೇ ಅಡ್ಡರಸ್ತೆಯಲ್ಲಿ ಬಿಬಿಎಂಪಿ ಪೈಪ್‌ಲೈನ್ ಅಳವಡಿಸಲು ಕೋರಿದ್ದು, ಮತ್ತು ಟಿ.ಸಿ.ಪಾಳ್ಯ ಮುಖ್ಯರಸ್ತೆಯಲ್ಲಿ ರಸ್ತೆಗೆ ರಾಜಕಾಲುವೆ ಪಕ್ಕ ನೀರು ಹರಿಯುತ್ತಿದ್ದು, ಇದನ್ನು ಸರಿಪಡಿಸಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ರಾಮ, ಹೊರಮಾವು ಅಗರ ರಾಜಣ್ಣ ಬಡಾವಣೆ:- ರವರು ಮಾತನಾಡಿ ಶಿಲ್ಪ ಬೇಕರಿ ಎದುರು ರಸ್ತೆ ನಿರ್ಮಿಸಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ಸಂಜೀವಪ್ಪ, ಸಿ.ಎಂ.ವಿ ನಗರ ಬಡಾವಣೆ:- ರವರು ಮಾತನಾಡಿ 17ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆಯಲ್ಲಿ ಕಲ್ವರ್ಟ್ ಎತ್ತರವಿದ್ದು, ರ್‍ಯಾಂಪ್‌ನ್ನು ಅಳವಡಿಸಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ದಯಾನಂದ್, ಶ್ರೀಮತಿ ರಾಜೇಶ್ವರಿ ದಾಸಪ್ಪ ಬಡಾವಣೆ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ ಸದರಿ ಬಡಾವಣೆಯಲ್ಲಿ ಚರಂಡಿ ತೆರೆದಿದ್ದು, ಕವರಿಂಗ್ ಸ್ಲ್ಯಾಬ್‌ನ್ನು ಅಳವಡಿಸಲು ಮತ್ತು 2ನೇ ಅಡ್ಡರಸ್ತೆಯಲ್ಲಿ ಆರ್.ಸಿ.ಸಿ ಚರಂಡಿ ಮಾಡಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರಿಗೆ ಅಗತ್ಯ ಕ್ರಮವಹಿಸಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ-ವಿಭಾಗ ರವರು ಸಭೆಯಲ್ಲಿ ಮಂಡಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ಸಂಖ್ಯೆ-25
ಬಿ.ಬಿ.ಎಂ.ಪಿ.